Clause 1 Etc.

MR. DEPUTY SPEAKER :—I will take up Clause 1, etc of the Bill. The question is.

"That clause 1, the long Title, the Preamble and the enacting formula do stand part of the Bill."

The motion was adopted Clauses 1 the long Title, the Preamble and th Enacting formula were added to the Bill.

Motion to Pass

SRI N. HUTCHAMASTHY GOWDA .—I move

"The Karnataka Societies Registration (Amendment) Bill, 1974 be passed."

MR DEPUTY SPEAKER : The question is.

"That the Karnataka Societies Registration (Amendment) Bill 1974 be passed."

The motion was adopted and the Bill was passed

CRIMINAL LAW AND IDENTIFICATION OF PRISONERS (MYSORE EXTENSION) (AMENDMENT) BILL 1973

Motion to Consider

SRI D. DEVARAJ URS(Chief Minister) :—I beg to move:

"That this House make a special order under proviso to subrule(3)of Rule 16 of the Rules of Procedure and Conduct of Business in the Karnataka Legislative Assembly for the continuance of the Criminal Law and Identification of Prisoners (Mysore Extension and Amendment) Bill, 1973."

By special order it can automatically apply to all areas.

I am requesting the leave of the House to extend it.

The leave was granted

SRI D. DEVARAJ URS :—I beg to move;

"That the Criminal law and Identification of Prisoners (Mysore Extension) (Amendment) Bill, 1973, be taken into considration."

MR. DEPUTY SPEAKER :—Motion moved.

'That the Criminal law and Identification of Prisoners (Mysore Extention) (Amendment) Bill, 1973, be taken into consideration."

†SRI D. DEVARAJ URS :—This is an Act already in force in the areas of Bombay, Hyderabad and Madras and Coorg District. Just to have a uniform legislation, we are extending this law to Mysore area. That is why we are bringing this amendment. The Criminal Law Amendment Act, 1932 (Central Act XXIII of 1932) is in force in the Bombay area, the Madras area and the Coorg District. We have to extend this law to other areas of the State of Karnataka. That is why we have brought this amendment before this house for acceptance. There are certain consequential amendments in the Bill. Under the provisions of the Central Act, for instance, there is a provision for taking identification of offenders who are liable to be punished under certain sections.

The Central Government empowers certain authorities like the Commissionor of Police and other officers to take their measurements and photographs and keep them in their records. And, there is another provision in the existing enactment of the Central Act as to how long it should be kept after a punishment is given. If the Court acquits a case, for instance, then that has to be destroyed. That provision is also there. So, this enactment has to be brought in other areas of the State.

So far as the other amendment *viz.*, the Criminal Act is concerned, that is again to extend it to the whole of the State.

So, these are the simple amendmente-consequential ones by reason of extending this. So, these may be approved by the honourable House.

†ಶ್ರೀ ಕಾಗೋಡುತಿಮ್ಮಪ್ಪ (ಸಾಗರ) :—ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮುಂಡಿಸಿರತಕ್ಕ ೧೯೭೩ನೇ ಇಸವಿಯ ಕ್ರಿಮಿನಲ್ ಲಾ ಅಂಡ್ ಐಡೆಟಿಫಿಕೇಷನ್ ಆಫ್ ಪ್ರಿಜನರ್ಸ್ ಎಕ್ಸ್‌ಟೆನ್ಷನ್ ಅಂಡ್ ಅಮೆಂಡ್‌ಮೆಂಟ್ ಬಿಲ್ಲ್ ಏನಿದೆ ಇದರ ಮುಖಾಂತರ ಕರ್ನಾಟಕ ರಾಜ್ಯದಲ್ಲಿ ವಿವಿಧಭಾಗಗಳಲ್ಲಿ ಇದ್ದಂತಹ ಒಂದು ಕಾನೂನನ್ನು ಕರ್ನಾಟಕದ ಆದ್ಯಂತ ತರುವ ಉದ್ದೇಶದಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ನೋಡಿದರೆ ನನಗೆ ಆಶ್ಚರ್ಯ ವಾಗುತ್ತದೆ. ಏತಕ್ಕೆಂದರೆ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ ಮಾಡಬೇಕಾದ ಕೆಲಸವನ್ನು ಇದುವರೆಗೂ ಸರ್ಕಾರ ಮುಂದುವರಿಸಿಕೊಂಡು ಬಂದು ಈಗ ಈ ತಿದ್ದುಪಡಿಯನ್ನು ತರುತ್ತಿದ್ದಾರೆ ಎಂದು ಒಂದು ರಾಜ್ಯ ಅಸ್ತಿತ್ವಕ್ಕೆ ಬಂದ ತಕ್ಷಣ ರಾಜ್ಯದ ವ್ಯಾಪ್ತಿಯಲ್ಲಿ ಬದಲಾವಣೆಯಾಗಬೇಕಾಗಿದ್ದ ಕಾನೂನು ಗಳು ಬದಲಾವಣೆಯಾಗಬೇಕಾಗಿತ್ತು. ಏತಕ್ಕೆಂದರೆ ನಮ್ಮ ರಾಜ್ಯಕ್ಕೆ ಬೇರೆ ರಾಜ್ಯದಿಂದ ಸೇರಿರತಕ್ಕ ಭಾಗ ಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಕಾನೂನು ಇರತಕ್ಕದ್ದನ್ನು ನಾನು ನೋಡಿದ್ದೇನೆ. ಜನರ ಭಾವನೆಗಳು ಒಂದಾಗುವುದು ಕಷ್ಟ. ಬೇರೆ ರಾಜ್ಯಗಳವರು ಒಂದು ರಾಜ್ಯಕ್ಕೆ ಬರುವ ಉದ್ದೇಶ ಜನರ ಭಾವನೆ ಒಂದು ಗೂಡಿ ಭಾವೈಕ್ಯತೆಯನ್ನು ಮಾಡಿಸಬೇಕೆಂದು ಮೂಲ ಉದ್ದೇಶ. ಆದ್ದರಿಂದ ಭಾವೈಕ್ಯತೆಯನ್ನು ಮೂಢಿಸತಕ್ಕ ಕೆಲಸವನ್ನು ಇಷ್ಟು ನಿಧಾನವಾಗಿ ಮಾಡಿದರೆ ಸ್ವಾಭಾವಿಕವಾಗಿ ಜನರ ಮನಸ್ಸಿನಲ್ಲಿ ಭಾವೈ ಕತೆ ಬರುವುದಿಲ್ಲ. ಆದ್ದರಿಂದ ಇದನ್ನು ತಡವಾಗಿ ತಂದಿದ್ದರೂ ಇದನ್ನು ನಾನು ಅಭಿನಂದಿಸುತ್ತೇನೆ. ಇನ್ನೂ ಕೆಲವು ಕಾನೂನುಗಳು ಬದಲಾವಣೆಯಾಗಬೇಕಾಗಿರತಕ್ಕವುಗಳು ಮುಂಬೈ ಪ್ರದೇಶದಿಂದ ಬಂದಿರ ತಕ್ಕವುಗಳು ಹಾಗೆಯೇ ಇವೆ, ಕೂರ್ಗ ಪ್ರದೇಶದಿಂದ ಬಂದಿರತಕ್ಕವುಗಳು ಹಾಗೆಯೇ, ಹೈದರಾಬಾದ್ ಪ್ರದೇಶದಿಂದ ಬಂದಿರತಕ್ಕವುಗಳು ಹಾಗೆಯೇ ಇವೆ ಮದ್ರಾಸ್ ಪ್ರದೇಶದಿಂದ ಬಂದಿರತಕ್ಕವುಗಳು ಹಾಗೆಯೇ ಇವೆ, ಹೀಗೆ ಇನ್ನೂ ಬದಲಾವಣೆ ಮಾಡಬೇಕಾದ ಕೆಲವು ಕಾನೂನುಗಳು ಹಾಗೆಯೇ ಇವೆ. ಈಗ ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಕ್ಟ್ರಾಯ್ ವಸೂಲು ಮಾಡುವ ಕಾನೂನು ಇಲ್ಲ. ಆದರೆ ಹಳೆಯ ಮೈಸೂರು ಭಾಗದಲ್ಲಿ ಇದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯವರು ನಮ್ಮಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ಆಕ್ಟ್ ಬಯ್ ಪಾಸು ಮಾಡುವಂತಹ ಕಾನೂನು ಇಲ್ಲ ಆದ್ದರಿಂದ ನಾವು ಆಕ್ಟ್ ಬಯ್ ಕೊಡುವುದಿಲ್ಲ. ಎಂದು ಹೇಳಿಬಿಡುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಅನೇಕ ಸಂದರ್ಭಗಳಲ್ಲಿ ಧರ್ಮ ಸಂಕಟ ಪ್ರಾರಂಭವಾಗುತ್ತದೆ, ಕರ್ನಾಟಕವನ್ನು ಒಂದುಗೂಡಿಸಬೇಕೆಂದು ಮುತುವರ್ಜಿಯಿಂದ ಬಹಳ ವರ್ಷಗಳ ಕಾಲ ರಾಜ್ಯವನ್ನು ಆಳಿದಂತಹ ಶ್ರೀಮಾನ್ ದೇವೇಗೌಡರ ಸ್ನೇಹಿತರಿಗೆ ಈ ಕೆಲಸವನ್ನು ಮಾಡುವುದಾದ್ರೂ ಏತಕ್ಕೆ ಹೊಳೆಯಲಿಲ್ಲ ಎಂದು ನನ್ನ ವ್ಯಸನ. ಬದಲಾವಣೆಯನ್ನು ಮಾಡಿ ಇವೀ ಕರ್ನಾಟಕಕೆ ಅನ್ವಯವಾಗುವಂತಹ ಇನ್ನು ಕೆಲವು ಕಾನೂನುಗಳು ಹಾಗೆಯೇ ಇವೆ ಆದ್ದರಿಂದ ಈ ಒಂದು ಕೆಲಸ ತಡವಾದರೂ ಈ ಒಂದು ತಿದ್ದುಪಡಿಯನ್ನು ತರುವುದರ ಮುಖಾಂತರ ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಾನೂನುಗಳನ್ನೂ ಒಂದುಗೂಡಿಸಲು ಪ್ರಯತ್ನವನ್ನು ಬಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಇದರಲ್ಲಿ ಒಂದು ಹೊಸ ವಿಚಿತ್ರವಾದ ಸನ್ನಿವೇಶ ಇದೆ, ಅದು ಏನೆಂದರೆ ಈ ತಿದ್ದುಪಡಿಯಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ Providing for the taking of measurements and photographs of persons arrested under Section 55 Cr P C., Section 96 of the Mysore Police Act, 1963 in connection with offences punishable with imprisonment for a term of one year or more or an offence for the commission of which on a second or subsequent occasion enhanced penalties have been provided". In Clause 4(i) it is said in connection with an offence punishable with rigorous imprisonment for a term of one year or upwards". ಎಂದು ಹೇಳಿದ್ದಾರೆ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ರಿಗರಸ್ ಇಂಪ್ರಿಜನ್‌ಮೆಂಟ್ ಇಲ್ಲ ಎಂದು ಹೇಳಿದ್ದಾರೆ. ಇದರಲ್ಲಿ ಸಾಧಾರಣವಾಗಿ ಒಂದು ವರ್ಷ ಸಜಾ ಆದ ಮೇಲೆ ಫೋಟೋಗ್ರಾಫ್ ಮತ್ತು ಮೆಜರ್‌ಮೆಂಟ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಆದರೆ ಇಲ್ಲಿ ಕ್ಲಾಜಿನಲ್ಲಿ ರಿಗರಸ್ ಇಂಪ್ರಿಜನ್‌ಮೆಂಟ್ ಇದ್ದರೆ ಮಾತ್ರ ಫೋಟೋಗ್ರಾಫ್ ಮತ್ತು ಮೆಜರ್‌ಮೆಂಟ್ಸ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಸ್ಟೇಟ್‌ಮೆಂಟ್ ಆಫ್ ಆಬೆಕ್ಟ್ಸ್‌ನಲ್ಲಿ ಹೇಳಿರುವುದಕ್ಕೂ ಕಾ ಜೆನಲ್ಲಿ ಸೇರಿರುವುದಕ್ಕೂ ವ್ಯತ್ಯಾಸ ಇದೆ.

ಶ್ರೀ ಡಿ. ದೇವರಾಜ ಅರಸ್ ;—ರಿಗರಸ್ ಎನ್ನುವುದು ಎಲ್ಲೋ ಬಿಟ್ಟುಹೋಗಿದೆ.

ಶ್ರೀ ಕಾಗೋಡುತಿಮ್ಮಪ್ಪ :—ಸ್ವಲ್ಪ ಹೆಚ್ಚುಕಡಿಮೆ ನಮಗೆ ಗೊತ್ತಿರುವ ಹಾಗೆ ಇಂಡಿಯನ್ ಪೀನಲ್ ಕೋಡಿನಲ್ಲಿ ಎಲ್ಲಾ ಸೆಕ್ಷನ್‌ಗಳಲ್ಲಿಯೂ ಸಿಂಪಲ್ ಇಂಪ್ರಿಜನ್‌ಮೆಂಟ್ ಇದೆ. ಮತ್ತು ರಿಗರಸ್ ಇಂಪ್ರಿಜನ್‌ಮೆಂಟ್ ಇದೆ ಆದರೆ ಈ ತಿದ್ದುಪಡಿಯ ಪ್ರಕಾರ ಫೋಟೋಗ್ರಾಫ್ ಮತ್ತು ಮೆಜರ್‌ಮೆಂಟ್ ತೆಗೆದುಕೊಳ್ಳುವುದು ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ವಿಚಾರಗಳಿಗೂ ಬರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ರಾಜಕೀಯ ಚಳುವಳಿ ಮಾಡುವಾಗ ಟ್ರೆಸ್‌ಪಾಸ್ ಕೇಸ್ ಹಾಕುತ್ತಾರೆ.

SRI D. DEVARAJ URS.:—If the hon. Member yields, I will clarify ರಿಗರಸ್ ಶಿಕ್ಷೆ ಏನಾಗುತ್ತದೆ ಎಂದರೆ It will confine itself to such sections under which rigorous imprisonment is stipulated. The number of applications to such sections will be less. It is very patent and obvious.

ಶ್ರೀ ಕಾಗೋಡುತಿಮ್ಮಪ್ಪ :—ಸಿಂಪಲ್ ಇಂಪ್ರಿಜನ್‌ಮೆಂಟ್ ಸ್ವಲ್ಪಹೆಚ್ಚು ಕಡಿಮೆ ಇಂಡಿಯನ್ ಪೀನಲ್ ಕೋಡಿನ ಬಹುಭಾಗದಲ್ಲಿ ಇದೆ ಈ ತಿದ್ದುಪಡಿ ಮಸೂದೆಯಲ್ಲಿ ಹೇಳಿರುವ ಹಾಗೆ ಮೆಜರ್‌ಮೆಂಟ್ ಪಂತಿಲ್ಲಿ ಫೋಟೋಗ್ರಾಫನ್ನು ಕ್ರಿಮಿನೇ ಪೋಲೀಸ್ ಆಕ್ಟ್ ಪ್ರಕಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಏನಾಗಿದೆ ಎಂದರೆ ಈಗ ಕೆಲವರು ರಾಜಕೀಯ ಚಳುವಳಿ ಮಾಡುವ ಉದ್ದೇಶದಿಂದ ಯಾತ್ರೆಯಾದರೂ ಒಂದು ಕಛೇರಿಯ ಮುಂದೆ ಡೆಮಾನ್‌ಸ್ಟ್ರೇಷನ್ ಮಾಡುವ ಉದ್ದೇಶದಿಂದ ಪೊರವಣಿಗೆ ಹೋಗುತ್ತಾರೆ ಆಗ ಐ.ಪಿ.ಸಿ. ರಿಸ್ಟ್ರಿಕ್ಷನ್ ಪ್ರಕಾರ ಟ್ರೆಸ್‌ಪಾಸ್ ಕೇಸು ಹಾಕುತ್ತಾರೆ. ಬ್ರೀಚ್ ಆಫ್ ಪೀಸ್ ಎಂದು ಟ್ರೆಸ್‌ಪಾಸ್ ಕೇಸು ಹಾಕುತ್ತಾರೆ. ಆದರೆ ಅಂಥಾ ಒಂದು ಸಂದರ್ಭದಲ್ಲಿಯೂ ಕೂಡ ಈ ಒಂದು ತಿದ್ದುಪಡಿಯ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾದರೆ ಹೇಗೆ?

ಡೆಮಾನ್‌ಸ್ಟ್ರೇಷನ್ ಮಾಡಬೇಕಾದರೆ ಕಾಂಪೌಂಡ್ ಟ್ರಿಸ್‌ಪಾಸ್‌ಮಾಡಿ ಹೋಗಬೇಕಾಗುತ್ತದೆ. 447 is trespass and the punishable section is 449, if I am correct.

SRI D. DAVARAJ URS.—I want to clarify, the doubts expressed by the hon member. Under Section 447, for Criminal Trespass, the punishment is, Imprisonment for three months or a fine of Rs. 500/- or both. ಈಗ ಏನು ಶಂಕೆ ಪಟ್ಟಿರೋ ಅದು ಇಲ್ಲ ಎಂದು ಅರ್ಥವಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇದನ್ನು ಹೇಳುವುದೇಕೆಂದರೆ, ಪೋಲೀಸ್ ಸ್ಟೇಷನ್ನಿಗೆ ಹೋದವರೆಲ್ಲರ ಬಗ್ಗೆಯೂ ಈ ಕಾನೂನನ್ನು ಪೋಲೀಸ್ ಅಧಿಕಾರಿಗಳು ಉಪಯೋಗಿಸಿಕೊಂಡರೆ ಬಹಳ ಕಷ್ಟವಾಗುತ್ತದೆಂದು. ಯಾರು ಕಳ್ಳತನ ಮತ್ತು ಕೂನಿ ಮಾಡಿರುತ್ತಾರೋ ಅಂತಹವರಿಗೆ ಮಾತ್ರ ಇದು ಬೇಕಾಗುತ್ತದೆ. ಎಲ್ಲರಿಗೂ ಬೇಕಾಗುವುದಿಲ್ಲ

SRI DEVARAJ URS.—Such Sections which attract one year of rigorous imprisonment or more will be applicable to them.

SRI KAGODU THIMMAPPA.—For example, the punishment provided is more than one year under Section 326; There are certain Offences which disqualify a person to contest in the elections and not all offences. ಆದಕಾರಣ ಇದನ್ನು ಹೀನಸ್ ಆಫ್ಸೆನ್ಸಸಗೆ ಮಾತ್ರ ಅನ್ವಯ ಮಾಡಿದ್ದರೆ ಸಾಧ್ಯವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಹೀನಸ್ ಆಫ್ಸೆನ್ಸಸ್ ಯಾವುದು, ಯಾವುದು ಹೀನಸ್ ಆಫ್ಸೆನ್ಸಸ್ ಅಲ್ಲ ಎಂಬುದನ್ನು ಮೊದಲು ತೀರ್ಮಾನ ಮಾಡಬೇಕು. ಆ ರೀತಿ ಮಾಡಿದನಂತರ ಈ ತಿದ್ದುಪಡಿಯನ್ನು ತೆಗೆದುಕೊಂಡು ಬರುವುದು ಒಳ್ಳೆಯದು. ಈಗ ಸಾಮೂಹಿಕವಾಗಿ ತೆಗೆದುಕೊಂಡು ಬಂದಿರುವುದು ಸರಿಯಲ್ಲ. ಆದಕಾರಣ ಇದನ್ನು ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದು. ಈಗ ಉದಾಹರಣೆಗೆ ಇಬ್ಬರು ಅಣ್ಣತಮ್ಮಂದಿರು ತಮ್ಮ ಹೊಲದ ಬಗ್ಗೆ ಹೊಡೆದಾಡಿದಾಗ ಒಬ್ಬರಿಗೆ ತಲೆಗೆ ಗಾಯವಾದರೆ ಅವನಿಗೂ ಸಹ ಇದನ್ನು ಅನ್ವಯ ಮಾಡುತ್ತೇವೆಂದು ತಾವು ಹೇಳುವುದಾದರೆ, ಅದು ನನಗೆ ಅರ್ಥವಾಗುವುದಿಲ್ಲ. ಇಂತಹ ಸಿವಿಲ್ ವ್ಯಾಜ್ಯಗಳಿಗೆಲ್ಲಾ ಇದನ್ನು ಅನ್ವಯ ಮಾಡಬಾರದು. ಏನಿದ್ದರೂ ಕಳ್ಳತನ ಮಾಡಿದರೆ, ಮರ್ಡರ್ ಮಾಡಿದರೆ ಇದರ ಅವಶ್ಯಕತೆ ಬೇಕಾಗುತ್ತದೆ ಆದಕಾರಣ ಇದನ್ನು ದೂರದೃಷ್ಟಿ ಇಟ್ಟುಕೊಂಡು ಆಲೋಚನೆ ಮಾಡಬೇಕು. ಬ್ರಿಟೀಷರ ಕಾಲಧಲ್ಲಿ ಇದ್ದಂಥ ಸ್ಥಿತಿ ಈಗ ಇಲ್ಲ. ನಾಗರೀಕ ಲೋಕದಲ್ಲಿದ್ದೇವೆ. ಮಂತ್ರಿ ಸಮ್ಮೇದೇ ಆದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದೇವೆ ಜನರು ಜನರನ್ನು ನಂಬುತ್ತಾರೆ ಆದಕಾರಣ ಎಲ್ಲ ಪ್ರಕರಣಗಳಿಗೂ ಇದನ್ನು ಅನ್ವಯ ಮಾಡಬಾರದಾದರೆ, ನಾಳೆದಿವಸ ಪೋಟೋಗಳನ್ನು ಇಡಲು ದೊಡ್ಡದೊಡ್ಡ ಕೋಣೆಗಳನ್ನು ನಿರ್ಮಾಣ ಮಾಡಬೆ ಕಾಗುತ್ತದೆ. ಆದಕಾರಣ ಇದನ್ನು ಎಲ್ಲ ಕೇಸ್‌ಗಳಿಗೂ ಅನ್ವಯ ಮಾಡಬಾರದೆಂದು ಹೇಳುತ್ತೇನೆ. ಇದಕ್ಕೆ ಮತ್ತೊಂದು ಉದಾಹರಣೆ ಕೊಡಬೇಕೆಂದರೆ, ಹಳ್ಳಿಗಳಿಂದ ಪಟ್ಟಣಕ್ಕೆ ಬಂದಂಥ ರೈತರು ಬಸ್‌ಸ್ಟಾಂಡ್‌ನಲ್ಲಿ ಅಥವಾ ರೈಲ್ವೇ ಸ್ಟೇಷನ್‌ನಲ್ಲಿ ರಾತ್ರಿಹೊತ್ತು ಶಾಲು ಹೊದ್ದು ಕುಳಿತಿದ್ದರೆ, ಬೀಟ್ ಮಾಡುವಂತಹ ಪೋಲೀಸರು ಅವರ ಹತ್ತಿರ ಹೋಗಿ ಹೆಸರು ಮತ್ತು ವಿಳಾಸ ಕೇಳಿದಾಗ, ಅವರು ಸರಿಯಾಗಿ ಹೇಳದಿದ್ದರೆ, ಕೂಡಲೇ ಪೋಲೀಸ್ ಆಕ್ಟ್ ಪ್ರಕಾರ ಹಿಡಿದುಕೊಂಡು ಹೋಗಿ ಕೇಸ್ ಹಾಕುತ್ತಾರೆ. ಈ ಕೂಡಲೇ ಆಕ್ಟ್‌ನ್ನು ಪೋಲೀಸರು ದುರುಪಯೋಗ ಮಾಡಿಕೊಂಡಿದ್ದಾರೆ. ತಾವು ಬೇಕಾದರೆ ಒಂದು ಶಾಲು ಹೊದ್ದುಕೊಂಡು ಬಸ್‌ಸ್ಟಾಂಡ್‌ನಲ್ಲಿ ಕುಳಿತುಕೊಳ್ಳಿ, ನಿಮ್ಮನ್ನು ಸಹ ಹಿಡಿದುಕೊಂಡು ಹೋಗಿ "being found under suspicious circumstances" ಎಂದು ಕೇಸ್ ಹಾಕುತ್ತಾರೆ. ಇಂತಹ ಕೇಸ್‌ಗಳು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಬೇಕಾದಷ್ಟು ಇವೆ. ಕಳ್ಳತನ ಮಾಡದಿದ್ದರೂ ಕಳ್ಳ ಎಂದು ಕೇಸ್ ಹಾಕಿದ್ದಾರೆ ಬೇಕಾದರೆ ಈ ಆಕ್ಟ್ ಕೆಳಗೆ ಎಷ್ಟು ಕೇಸ್‌ಗಳನ್ನು ರಾಜ್ಯದಲ್ಲಿರುವ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳಲ್ಲಿ ಹಾಕಲಾಗಿದೆ, ಎಷ್ಟು ತೀರ್ಮಾನವಾಗಿದೆ, ಎಷ್ಟು ತೀರ್ಮಾನವಾಗಿಲ್ಲ ಎಂಬ ಬಗ್ಗೆ ವಿವರಗಳನ್ನು ತರಿಸಿಕೊಂಡರೆ ಗೊತ್ತಾಗುತ್ತದೆ. ನಾಳೆದಿವಸ ಮಾನ್ಯ ನಿಜಲಿಂಗಪ್ಪನವರು ಏನಾದರೂ ಚಳುವಳಿ ಮಾಡಿದರೆ ಈ ತಿದ್ದುಪಡಿ ಕಾನೂನಿನ ಪ್ರಕಾರ ಅವರ ಪೋಟೋವನ್ನು ಸಹ ಇಡಬೇಕಾಗುತ್ತದೆ.

ಉಪಾಧ್ಯಕ್ಷರು.—ಅವರು ಇಲ್ಲಿ ಇಲ್ಲದಿರುವಾಗ ಅವರ ಹೆಸರನ್ನು ಏತಕ್ಕೆ ಹೇಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಮೊನ್ನೆ ಶ್ರೀಮಾನ್ ವೀರೇಂದ್ರಪಾಟೀಲ್ ಅವರು ಮತ್ತು ಮಾನ್ಯ ನಿಜಲಿಂಗಪ್ಪನವರು ಬಿಜಾಪುರದಲ್ಲಿ ಸತ್ಯಾಗ್ರಹ ಮಾಡಿದರು. ಇಂತಹ ಸತ್ಯಾಗ್ರಹಗಳು ಆಗಾಗ್ಗೆ ರಾಜ್ಯದಲ್ಲಿ ಇನ್ನು ಮುಂದೆಯೂ ಸಹ ನಡೆಯುತ್ತವೆ. ಆಗ ಪೋಲೀಸಿನವರು ಅವರನ್ನು ಹಿಡಿದರೆ, ಅವರುಗಳ ಪೋಟೋವನ್ನು ಸಹ ತೆಗೆದಿಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅವರನ್ನು ನಾವು ಹಿಡಿಸಲಿಲ್ಲ ಎಂದು ಅವರಿಗೆ ಕೊಪವಿದೆ.

ಶ್ರೀ ಕಾಗೋಡು ತಿಮ್ಮಪ್ಪ — ಮುಂಖ್ಯವಾಗಿ ಸೈಂಟಿಫಿಕ್ ಆಗಿ ಇದನ್ನು ತಿದ್ದುಪಡಿ ಮಾಡಬೇಕು ಎಂದು ಹೇಳುತ್ತೇನೆ, ರೀಜನಬಲ್ ಡಿಸ್ಕ್ರಿಪ್ಷನ್ ಇರಬೇಕು. ಇಲ್ಲದಿದ್ದರೆ ಇದು ಅರ್ಥಹೀನವಾಗುತ್ತದೆ. ಅದಕಾರಣ ನಾನು ಹೇಳಿದ ದೃಷ್ಟಿಕೋನದಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ, ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

೪–೩೦ ಪಿ.ಎಂ.

† ಶ್ರೀ ಎಚ್.ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡಬೇಕಾಗಿದೆ. ಖೈದಿಗಳನ್ನು ಗುರುತಿಸುವುದಕ್ಕೆ ಇಂತಹ ಒಂದು ಕಾನೂನು ಬೇಕು ಎಂದು ಅದರ ಉದ್ದೇಶವನ್ನು ತಿಳಿಸಿದ್ದಾರೆ. ಅಂದರೆ ಇಂತಹ ಒಂದು ಕಾನೂನು ಇಲ್ಲದೆ ಇದುವರೆಗೆ ನಮ್ಮ ಸರ್ಕಾರ ಆಡಳಿತವನ್ನು ನಡೆಸಿಕೊಂಡು ಬಂದಿದೆ ಎಂದು ಅರ್ಥವಾಯಿತು. ಆದರೆ ಅಪರಾಧ ಮಾಡಿದವರು ತಪ್ಪಿಸಿಕೊಂಡಿದ್ದರೆ, ಅಂತಹ ಗುರುತು ಸಿಕ್ಕಲ್ಲಲ್ಲ ಎನ್ನುವಷ್ಟಕ್ಕಿಂಥ ದೂರುಗಳು ಹೆಚ್ಚಾಗಿ ಇಲ್ಲಿಯವರೆಗೆ ಬಂದಿಲ್ಲ. ಆದರೆ ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಇಂತಹ ಪ್ರದೇಶಗಳಲ್ಲಿ ಈ ಕಾನೂನು ಈಗಾಗಲೇ ಇದ್ದರೂ ಸಹ, ಅಲ್ಲಿ ಅಪರಾಧ ಮಾಡಿದವರು ತಪ್ಪಿಸಿಕೊಂಡು ಹೋಗಿರುವ ಸಂದರ್ಭ ಇರಬಹುದು. ಆದರೆ ಇಂಥಾ ಭಾಗದಲ್ಲಿ ಹೀಗಾಗಿದೆ ಎನ್ನುವುದು ಬಂದಿಲ್ಲ. ಆದುದರಿಂದ ಈ ಕಾನೂನನ್ನು ವ್ಯಾಪಕ ಮಾಡತಕ್ಕಂಥಾದ್ದು ಅನಾವಶ್ಯಕ ಎಂದು ಹೇಳುತ್ತೇನೆ. ಇದರಲ್ಲಿ ನನ್ನ ಉದ್ದೇಶ ಏನೆಂದರೆ ಅನಾವಶ್ಯಕವಾದ ಕಾನೂನುಗಳು ಇದು ಅದನ್ನು ರೀಲ್ ಮಾಡಬೇಕಾದ್ದು ಅವಶ್ಯಕ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಪ್ಪಿಸಿಕೊಂಡು ಹೋದ ಎಂದು ದೂರು ಬರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ತಪ್ಪಿಸಿಕೊಂಡು ಹೋದ ಎನ್ನುವ ದೂರುಗಳು ಇದುವರೆಗೆ ಬಂದಿಲ್ಲ. ಆ ರೀತಿ ಏನಾದರೂ ದೂರುಗಳು ಬಂದಿದ್ದರೆ ಆ ಬಗ್ಗೆ ಸರ್ಕಾರದವರು ಅಂಕಿಅಂಶ ಕೊಟ್ಟು ಸಮರ್ಥನೆ ಮಾಡುವುದಾದರೆ ಆವಾಗ ಅದನ್ನು ಒಪ್ಪಬಹುದು.

ಇನ್ನು ಎರಡನೆಯದಾಗಿ ಹೇಳಬೇಕಾದರೆ ದಸ್ತಗಿರಿಯಾದವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವರ ಆಳತೆ ಮತ್ತು ಪೋಟೋಗಳನ್ನು ತೆಗೆದುಕೊಳ್ಳುವುದಕ್ಕೆ ಈ ಮಸೂದೆ ಮೂಲಕ ಏನು ಮಾಡುತ್ತಾ ಇದ್ದೀರಿ ಅದು ಅನೇಕ ಮುಗ್ಧ ಜನರನ್ನು ಹಿಂಸೆ ಮಾಡುವುದಕ್ಕೆ ಮತ್ತು ರಾಜಕೀಯವಾಗಿದ್ದರೆ ಏನಾದರೂ ದ್ವೇಷ ತೀರಿಸಿಕೊಳ್ಳುವುದಕ್ಕೆ ಮತ್ತು ಅನೇಕ ಜನರನ್ನು ತಪ್ಪಿಗೇ ಬೇಕಾಗಿಲ್ಲದೇ ಇರುವವರನ್ನು ಸಮಾಜದಲ್ಲಿ ಸತ್ಪ್ರಜೆಗಳಾಗಿ ಇರುವವರನ್ನು ತೊಂದರೆಗೆ ಈಡುಮಾಡುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಹೇಗೆಂದರೆ ಪೋಲೀಸ್ ಆಕ್ಟ್ ಪ್ರಕಾರ ಯಾವನಾದರೂ ಒಬ್ಬ ಅಪರಾಧಿಯನ್ನು ದಸ್ತಗಿರಿ ಮಾಡಿದರೆ ಅವನಿಗೆ ಒಂದು ವರ್ಷಕ್ಕಿಂತ ಹೆಚ್ಚು ಶಿಕ್ಷೆ ಆಗಿದ್ದರೆ ಆತನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಪೋಟೋ ತೆಗೆದುಕೊಳ್ಳಬೇಕು ಎಂದು ಈ ಕಾನೂನಿಗೆ ಅವಕಾಶ ಕೊಡುವುದಾದರೆ ಅದಕ್ಕಿಂತ ಹೆಚ್ಚಿನ ಅವಮಾನ, ಬೇರೊಂದಿಲ್ಲ. ನಮ್ಮ ರಾಜ್ಯದಲ್ಲಿ ಎಲ್ಲರೂ ಒಂದೇ ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಮತ್ತು ರಾಜ್ಯದ ಜನರನ್ನು ರಕ್ಷಣ ಮಾಡಬೇಕು ಎನ್ನುವ ಭಾವನೆ ಅವರಲ್ಲಿ ಬರಬೇಕು ಎಂದು ಅವರಿಗೆ ಈ ಒಂದು ಕಾನೂನು ಕೊಡುವುದಾದರೆ ಇದರಿಂದ ಹೆಚ್ಚು ದುರುಪಯೋಗವಾಗುವ ಸಂದರ್ಭ ಬರುತ್ತದೆ. ಅದುದರಿಂದ ಈ ದಸ್ತಗಿರಿಗೆ ಸಂಬಂಧಪಟ್ಟ ಒಂದು ಕಾನೂನು ಇದರಲ್ಲಿ ಏನು ಇದೆ ಅದನ್ನು ಬಿಟ್ಟು ಬಿಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ:

† ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡಿದಾಗ ರಾಜ್ಯದ ಎಲ್ಲ ಜನರ ಒಂದು ಗೂಡುವಿಕೆಯ ದೃಷ್ಟಿಯಿಂದ ಮತ್ತು ಭಾವೈಕ್ಯತೆಯ ದೃಷ್ಟಿಯಿಂದ ಅಂತಹ ಕಾನೂನನ್ನು ಮೊದಲೇ ತರಬೇಕಾಗಿತ್ತು, ಈಗ ತಂದಿದು ನಿಧಾನವಾಯಿತು

ಎಂದು ಹೇಳಿದರು. ಈಗ ನಾವು ಈ ಕಾನೂನನ್ನು ತಂದರೆ ಇದನ್ನು ಏತಕ್ಕೆ ಹಾಗೆ ಮಾಡಿದಿರಿ, ಹೀಗೆ ಮಾಡಿದಿರಿ, ಅದಕ್ಕೆ ಅಮೆಂಡ್‌ಮೆಂಟ್ ತಂದು ಒಂದು ಲಿಸ್ಟ್ ಮಾಡಿ ಹೇಳಬೇಕಾಗಿತ್ತು ಮತ್ತು ಇದನ್ನೆಲ್ಲಾ ಸೇರಿಸಿ ಒಂದೇ ಕ್ಲಾಸ್‌ನಲ್ಲಿ ಹೇಳಿಬಿಟ್ಟರೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ನಾನು ಈ ಬಗ್ಗೆ ಈಗಾಗಲೇ ಹೇಳಿದ್ದೇನೆ. ಏನೆಂದರೆ ಈ ಆಕ್ಟ್ ಯಾವ ಭಾಗದಲ್ಲಿ ಇಲ್ಲ ಅಲ್ಲಿಗೆ ಇದನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದೇವೆ ಎಂದು, ಅದೇದರಿಂದ ಮಾನ್ಯ ಸದಸ್ಯರು ಹೇಳುವುದರಲ್ಲಿ ಏನು ಒಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೋ ಅದು ಸಾಧುವಾದ ಶಂಕೆಯಲ್ಲಿ. ಈ ಆಕ್ಟ್‌ನ ೬ಎನೇ ಸೆಕ್ಷನ್‌ನಲ್ಲಿ ಏನು ಇದೆ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಾನೂನಿನಲ್ಲಿ ಒಂದು ಅರ್ಥ ಇದ್ದರೆ ಅದಕ್ಕೆ ಒಂದು ದ್ವಂದ್ವ ಅರ್ಥ ಕೊಟ್ಟು ಹೇಳುತ್ತೀರಿ.

MR. DEPUTY SPEAKER.—The hon; Member is not a practicing lawyer.

ಶ್ರೀ ಡಿ ದೇವರಾಜ ಅರಸ್.—ಹಾಗಾದರೆ ನಿಜವಾಗಲೂ ಕಕ್ಷಿದಾರರು ಬದುಕಿಕೊಂಡರು, ೬ಎನೇ ಸೆಕ್ಷನ್ನಿನ ಪೋಲೀಸ್ ಆಕ್ಟ್‌ನಲ್ಲಿ ಈ ರೀತಿ ಇದೆ.="...whoever found between sun set and sun rise..." ಹೀಗಿರುವುದರಿಂದ ಎಲ್ಲೋ ಕೂತಿದ್ದವನನ್ನು ಹಿಡಿದು ಬಿಡುತ್ತಿದ್ದಾರೆ ಎಂದರೆ ಅರ್ಥವಿಲ್ಲ, ಈ ಪೋಲೀಸ್ ಆಕ್ಟ್‌ನಲ್ಲಿ ಎರಡು ಭಾಗ ಇದೆ. ಮೊದಲನೆಯ ಭಾಗ ಕ್ರೈಮ್‌ನನ್ನು ಹಿಡಿಯಂವುದು ಒಂದು ಭಾಗ ಅದರೆ ಇನ್ನೊಂದು ಭಾಗ ಕ್ರೈಮ್ ಕಮಿಟ್ಸ್ ಆಗದೇ ಇದ್ದ ಹಾಗೆ ಅವರು ನೋಡಿಕೊಳ್ಳಬೇಕು. ಇದಕ್ಕೆ ಒಂದು ಕಾನೂನು ಮಾಡಿ ಅವರ ಕೈಯ್ಯಲ್ಲಿ ಕೊಟ್ಟರೆ ಅವರು ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವುದಾದರೆ ಕೆಲವರು ಯಾವ ಸ್ಥಾನದಲ್ಲಿದ್ದರೂ ಕೂಡ ಅದನ್ನು ದುರುಪಯೋಗ ಮಾಡಿಕೊಳ್ಳುವರು ಇದ್ದಾರೆ. ಹೀಗೆ ದುರುಪಯೋಗ ಮಾಡಿಕೊಳ್ಳುತ್ತಾರೆಂದು ಈ ಕಾನೂನೇ ಬೇಡ ಎನ್ನುವುದಾದರೆ ಯಾವ ಕಾನೂನು ಬೇಡ, ಯಾರ ತಲೆಯಾದರೂ ಒಡೆಯಲಿ, ಯಾರ ಮನೆಯಲ್ಲೆಲ್ಲಾದರೂ ಕಳ್ಳತನ ಮಾಡಲಿ ಎಂದು ಬಿಟ್ಟುಬಿಟ್ಟರೆ ಯಾವ ಪ್ರೈವೇಟ್ ಪ್ರಾಪರ್ಟಿಗೂ ಸ್ಯಾಂಕ್ಟಿಟಿ ಇರುವುದಿಲ್ಲ. ಅದರಿಂದ ಎಷ್ಟು ಲಾಸ್ ಆಗುತ್ತದೆ ಯೋಚನೆ ಮಾಡಿ ಯಾವ ಸೋಷಿಯಲಿಸಂ ನವರು ಬಂದು ಈ ರೀತಿಯಾದಂಥ ಸರ್ಕಾರ ಸ್ಥಾಪನೆ ಮಾಡುತ್ತಾರೋ ಮಾಡಲಿ. ಅದರೆ ಈವೊತ್ತಿನ ದಿವಸ ಅಂಥಾದ್ದನ್ನು ನಾವು ಒಪ್ಪುವುದಿಲ್ಲ. ಈವೊತ್ತಿನ ದಿವಸ ತಪ್ಪಿತಸ್ಥರನ್ನು ಹಿಡಿಯಂವುದರ ಜೊತೆಗೆ ತಪ್ಪು ಮಾಡದೇ ಇದ್ದ ಹಾಗೆ ನೋಡಿಕೊಳ್ಳಬೇಕು. Prevention is also equally important, in may opinion it is more important. ಕಾನೂನಿನಲ್ಲಿ ಈ ರೀತಿ ಇದೆ. "Armed wita any dangerous instrument with an intention to commit office" ಸಂಜ್ಞೆನೆ ಕೂತಿದ್ದವನನ್ನು ಹಿಡಿಯಬೇಕು ಅಂತಲ್ಲ. "Or havind is face covered or otherwise disguised with intent to commit an offence" ಎಷ್ಟೋ ಕಡೆ ರಾತ್ರಿ ಕಾಲದಲ್ಲಿ ಬಾಕು ಹಾಕಿಕೊಂಡು, ಮುಖಕ್ಕೆ ಮುಖವಾಡ ಇಟ್ಟುಕೊಂಡು, ವೇಷ ಮರೆಸಿಕೊಂಡು ಕಳ್ಳತನ ಮಾಡುತ್ತಾರೆ. ಆ ಕಳ್ಳತನದಿಂದ ತಪ್ಪಿಸಿಕೊಳ್ಳಬೇಕು ಆ ರೀತಿ ಮಾಡುತ್ತಾರೆ. ಅಲ್ಲದೇ ಎಷ್ಟೋ ಸಂದರ್ಭಗಳಲ್ಲಿ ಹಾದಿಬೀದಿಗಳಲ್ಲಿ ಹೋಗುವವರನ್ನು ಹಿಡಿದುಕೊಂಡು ಹೋಗುವ ಕೆಲಸಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಂದಿರಾ ಬ್ರಿಗೇಡ್‌ನವರು ಈ ಕೆಲಸ ಮಾಡುತ್ತಿದ್ದಾರೆ.

SRI DEVARAJ URS.—Madam. I take strong objection to what th hon. Member says, what is he talking? I know what you are talking and why you are talking.

ಶ್ರೀ ಕೋಣಂದೂರು ಲಿಂಗಪ್ಪ.—ಇರೋ ವಿಚಾರ ಅದು. ನೀವ್ಯಾಕೆ ರೇಗ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಹುಡುಗಾಟ ಮಾಡುವುದಕ್ಕೆ ಒಂದು ಮಿತಿ ಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಇಂದಿರಾ ಬ್ರಿಗ್ರೇಡ್‌ನವರು ಚಾಕಂವಿನಲ್ಲಿ ಹೊಡೆದರಂ ಎನುವುದನ್ನು ಪೇಪರ್‌ನಲ್ಲಿ ಓದಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನೂ ಪೇಪರ್‌ನಲ್ಲಿ ಓದಿದ್ದೇನೆ. ಹೊಳೆನರಸೀಪುರದಲ್ಲಿ ಯಾರು ಯಾರನ್ನೋ ಹಿಡಿದುಕೊಂಡು ಯಾರೋ ಹೊಡೆಸಿದರೆ ಅದಕ್ಕೆ ದೇವೇಗೌಡರು ಹೊಡೆಸಿದರು ಎಂದು ಹೇಳೋಣವೇ ?

SRI H. D. DEVE GOWDA. You cannot speak like that, your Department is meant for it.

SRI D. DEVARAJ URS.—You also can't speak like that.

At that stage Some Members from Opposition side stoob and protested

SRI H.D. DEVE GOWDA.—Everybody knows what Indira Brigade

ಶ್ರೀ ಸಿ. ಬೈರೇಗೌಡ.—ಯಾರು ತಪ್ಪು ಮಾಡಿದರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ.—ಇಂದಿರಾ ಬ್ರಿಗ್ರೇಡ್‌ನವರು ಏನು ಮಾಡುತ್ತಿದ್ದಾರೆ ಎನ್ನುವುದು ದೇಶಕ್ಕೇ ಗೊತ್ತಿದೆ.

ಒಬ್ಬ ಸದಸ್ಯರು.—ಎಲ್ಲಾ ವಣಡಿದ್ದು ಬಂದಿದೆ.

MR. DEPUTY SPEAKER,—The hon. member may please resume his seat. I request the hon. members to please help the Chair in maintaining dignity and decorum of the House. It cannot be done if there is no restraint on both the sides.

ಶ್ರೀ ಕಾಗೋಡು ತಿಮ್ಮಪ್ಪ.—ಇಂದಿರಾ ಬ್ರಿಗೇಡ್‌ನವರು ಪಾಟ್ನಾದಲ್ಲಿ ಗುಂಡಾಗಿರಿ ಮಾಡಿದರೆಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ದೇವೇಗೌಡರು ಹೊಳೆನರಸಿಪುರದಲ್ಲಿ ಹೊಡೆಸಿದ್ದಾರೆ ಎಂದು ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ಮಾತನಾಡುವುದು ಸರಿಯೇ ?

ಶ್ರೀ ಟಿ ಎಂ. ಮಂಜುನಾಥ್.—ಶ್ರೀಮಾನ್ ದೇವೇಗೌಡರು ಹೊಳೆನರಸೀಪುರದಲ್ಲಿ ಹೊಡೆಸಿದ್ದಾರೆಂದು ನಾವು ಕೇಳಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ರೆಕಾರ್ಡಿನಲ್ಲಿ ಹೊಡೆದು ಹಾಕಿಸಿ.

MR. DEPUTY SPEAKER.—If there is an interruption it may be permitted provided it is within the scope. If all sorts of things are uttered and tempers are raised it will be difficult to maintain dignity and decorum of the House.

SRI D. DEVRAJ URS.—Unless a police officer or police constable who is in charge of the area is not capable of using his discretion properly, such things as Sri Konandur Lingappa visualises might happen. I do not completely rule it out.....

ಶ್ರೀ ಟಿ ಎಂ. ಮಂಜುನಾಥ್.—ಶ್ರೀಮಾನ್ ಲಿಂಗಪ್ಪನವರಿಗೆ ಭಯಪಡಿಸುವಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೋಪ ಮಾಡಿಕೊಂಡು ಮಾತನಾಡಿದರು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಮಾನ್ಯ ವಿರೋಧಪಕ್ಷದ ನಾಯಕರ ಮೇಲೆ ಆರೋಪ ಮಾಡಿದ್ದಾರೆ.

SRI D. DEVARAJ URS.—"In respect of whom direction or order under section 54 or 55 of the Mysore Police Act 1963 has been made, shall if so required by a police officer," if he finds that it is neces-

sary to have this thing, then he may take it : otherwise not. This is the position... ... . Many of the sections do not come under this..... criminal intention with a view to personal gain or animosity. It is always felt that if a man with a criminal intention rerorts to violence of killing a person he should be put to imporisonment again. Sometimes it might so happen that out of emotion he has done. He may not repeat. ಸೆಕ್ಷನ್ ೯೬ ಪ್ರಕಾರ ಇರತಕ್ಕಂಥಾದ್ದು ಯಾವುದೇ ಒಬ್ಬ ಮನುಷ್ಯನಮೇಲೆ ಅನುಮಾನಾಸ್ಪದ ಕಂಡರೆ ಆತನನ್ನು ಕರೆದುಕೊಂಡು ಹೋಗಿ ಅವನ ಹಿಂದಿನ ರೇಕಾರ್ಡ್ ಏನಾದರೂ ಇದ್ದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಒಬ್ಬ ಮನುಷ್ಯ ಸುಮ್ಮನೆ ದಾರಿಯಲ್ಲಿ ಹೋದರೂ ಅಥವಾ ಕೂತು ಕೊಂಡರು ಅವನನ್ನು ಕರೆದುಕೊಂಡುಹೋಗಿ ಶಿಕ್ಷೆ ಕೊಡುವುದಿಲ್ಲ. ಎಲ್ಲಿ ಸಸ್ಪಿಷಿಯನ್ ಮೂಮೆಂಟ್ ಕಂಡುಬಂದಾಗ ಅವನನ್ನು ಹಿಡಿದುಕೊಂಡು ಹೋಗಿ ಪರೀಕ್ಷೆ ಮಾಡುತ್ತಾರೆ, ಯಾರೋ ಹಳ್ಳಿಯಲ್ಲಿ ಕಂಬಳಿ ಹೊದ್ದುಕೊಂಡು ಕೂತಿದ್ದರು ಎಂದು ಅವರ ಮೇಲೆ ಅನುಮಾನ ಪಡುವುದಕ್ಕೆ ಸಾಧ್ಯವೇ? ಒಬ್ಬ ಮನುಷ್ಯನ ಫೋಟೋಗ್ರಾಫಿ ಮತ್ತು ಮೆಷರ್‌ಮೆಂಟ್ ಇದ್ದರೆ ಒಂದು ವೇಳೆ ಸಸ್ಪಿಷಿಯಸ್ ನೇಚರ್ ಕಂಡುಬಂದರೆ ಆಗ ಈ ಫೋಟೋಗ್ರಾಫಿ ಮತ್ತು ಮೆಷರ್‌ಮೆಂಟ್ಸ್ ಇದ್ದರೆ ಕೇಸನ್ನು ಪತ್ತೆ ಹಚ್ಚಲು ಸಹಾಯವಾಗುತ್ತದೆ. ಎಷ್ಟೋ ದೂರುಗಳು ಬರುತ್ತವೆ ಕೂನಿ, ಕಳ್ಳತನ ಇವೇ ಮೊದಲಾದ ದೂರು ಗಳು ಬಂದಂಥ ಸಮಯದಲ್ಲಿ ಐಡೆಂಟಿಫಿಕೇಷನ್ ಇದ್ದರೆ ಅಂಥ ಕೇಸುಗಳನ್ನು ಹಿಡಿಯುವುದಕ್ಕೆ ಸಹಾಯ ವಾಗುತ್ತದೆ. ಈಗಾಗಲೇ ಸೆಂಟ್ರಲ್ ಆಕ್ಟಿನಲ್ಲಿ ಇದೆ. ಅದನ್ನು ಜಾರಿಗೆ ಕೊಡುವುದಕ್ಕೆ ಇದನ್ನು ತಂದಿ ದ್ದೇವೆ. ೧೯೬೦ನೇ ಇಸವಿಯಲ್ಲೇ ಇದನ್ನು ತರಬೇಕೆಂದು ಇತ್ತು. ಆದರೆ ಅದು ಹಾಗೆಯೇ ಉಳಿದು ಬಂದಿತ್ತು. ಅದನ್ನು ಈಗಲಾದರೂ ಮಾಡಿಸೋಣ ಎಂದು ತಂದಿದ್ದೇವೆ. ಇನ್ನು ಏನಾದರೂ ಹೋಂ ಡಿಪಾರ್ಟ್‌ಮೆಂಟಿನಲ್ಲಿ ಯೂನಿಫಾರಂ ಲಾಸ್ ಯಾವುದಾದರೂ ಇದ್ದರೆ ಅದನ್ನು ತರಬೇಕೆಂದು ಕೇಳಿದೆ. ಆದರೆ ಇದೇ ಕೊನೆಯದು ಎಂದು ಹೇಳುತ್ತಾರೆ. ಆದಷ್ಟು ಬೇಗ ಈ ರೀತಿ ಯೂನಿಫಾರಂ ಆಫ್ ಲಾಸ್ ತಂದರೆ ಇದನ್ನು ಎಲ್ಲರೂ ಒಪ್ಪತಕ್ಕಂಥ ಮಾತು. ಆಮೇಲೆ ಇಂಡಿಯನ್ ಫೀನಲ್ ಕೋಡ್‌ನಲ್ಲಿ ನಾನಾ ಸೆಕ್ಷನ್ಸ್ ಇದ್ದೇವೆ. ಆದರಲ್ಲಿ ಯಾವುದು ಯಾವುದು ಸೆಕ್ಷನ್ ಫನಿಷ್‌ಮೆಂಟ್ ಕೊಡಬೇಕು ಎಂದು ಇದೆ. ಅದರ ಪ್ರಕಾರ ಮಾಡಿಕೊಟ್ಟಿದ್ದಾರೆ all these things do happen ಕೆಲವು ಬರುತ್ತವೆ, ಕೆಲವು ಬರುವುದಿಲ್ಲ. ಕೆಲವು ಸಮಯದಲ್ಲಿ ಎಲ್ಲಾ ಜನರನ್ನು ಕೊಲೆಮಾಡಬೇಕು ಎನ್ನುವ ಮನೋಭಾವನೆ ಗೂತ್ತಾದಾಗ ಅವನನ್ನು ಕಂಡುಹಿಡಿಯಲು ಅವನ ಫೋಟೋಗ್ರಾಫಿ ಮತ್ತು ಮೆಷರ್‌ಮೆಂಟ್ ಇಲ್ಲದಿದ್ದರೆ ಕೇಸನ್ನು ಪತ್ತೆಮಾಡಲು ಕಷ್ಟವಾಗುತ್ತದೆ. ಇದು ಮೊದಲಿನಿಂದಲೂ ಇದೆ. ಇದನ್ನು ಈಗಲೂ ಕಂಟಿನ್ಯೂ ಮಾಡುತ್ತಿದ್ದಾರೆ.

MR. DEPUTY SPEAKER.—I will put the consideration motion to the vote of the House. The question is :

"That the Criminal Law and Indentification of Prisoners (Mysore Extension) (Amendment) Bill, 1973, be taken into consideration."

The motion was adopted.

Clauses 2 and 3

MR. DEPUTY SPEAKER.—Clause by clause consideration. There re no amendments to clauses 2 and 3. The question is :

"That clauses 2 and 3 do stand part of the Bill."

The motion was adopted.

Clauses 2 and 3 were added to the Bill.

Clause 4

MR. DEPUTY SPEAKER.—There is an amendment by the Chief Minister to clause 4 of the Bill. He may kindly move his amendment.

SRI D. DEVARAJ URS.—I beg to move :

"In sub-clause (2), for clause (a) of section 4, the following shall be substituted, namely :—

"(a) who has been arrested in connection with an offence punishable under section 96 of the Karnataka Police Act, 1963 or in connection with an offence punishable with rigorous imprisonment for a term of one year or upwards or in connection with an offence for the commission of which on a second or subsequent occasion enhanced penalties have been provided for under any law for the time being in force ; or."

MR. DEPUTY SPEAKER.—Amendment moved.

"In sub-clause (2), for clause (a) of section 4, the following shall be substituted, namely :—

"(a) who has been arrested in connection with an offence punishable under section 96 of the Karnataka Police Act, 1963 or in connection with an offence punishable with rigorous imprisonment for a term of one year or upwards or in connection with an offence for the commission of which on a second or subsequent occasion enhanced penalties have been provided for under any law for the time being in force ; or."

SRI D. DEVARAJ URS.—This is a simple amendment seeking just to omit certain words. There was a subsequent amendment to Central Act. Therefore we have thought it fit to omit it and only taken the second one. Here we have repeated the whole clause.

MR. DEPUTY SPEAKER.—The question is :

"In sub-clause (2), for clause (a) of section 4 the following shall be substituted, namely :—

"(a) who has been arrested in connection with an offence punishable under section 96 of the Karnataka Police Act, 1963 or in connection with an offence punishable with rigorous imprisonment for a term of one year or upwards or in connection with an offence for the commission of which on a second or subsequent occasion enhanced penalties have been provided for under any law for the time being in force ; or."

The amendment was adopted

MR. DEPUTY SPEARER.—The question is :

"That clause 4, as amended, do stand part of the Bill."

The motion was adopted.

Clause 4 as amended, was added to the Bill.

The Schedule

MR. DEPUTY SPEAKER.—The question is:—

"That schedule to the Bill do stand part of the Bill."

The motion was adopted.

The Schedule was added to the Bill.

MR. DEPUTY SPEAKER.—Clause 1 etc The question is:—

"That clause 1, the long Title the Preamble and enacting Formua do stand part of the Bill-"

The motion was adopted

Clause 1, the Title the Preamble and the enacting Formua were added to the Bill.

SRI D. DEVARAJ URS (Chief Minister). Motion to pass I beg tomove.

"That the Criminal Law and Identification of Prisoners (Mysore Extension) (Amendment) Bill, 1973, as amended, be passed."

MR. DEPUTY SPEAKER.—The question is.

'That the Criminal Law and Identification of Prisoners (Mysore Extension) (Amendment) Bill, 1973, as amended, be passed."

The motion was adopted and The Bill was passed.

INDUSTRIAL EMPLOYMENT (STANDING ORDERS) (MYSORE AMENDMENT) BILL, 1973.

Motion to Consider

SRI S. M. YAHYA (Minister for Labour and Tourism).—I beg to move.

"That the Industrial Employment (Standing Orders) (Mysore Amendment) Bill, 1973, be taken into consideration."